4. ಇದರ ಅವಶ್ಯಕತೆಗಾಗಿ ರಸ್ತೆ ಜಂಗ, ರಸ್ತೆ ಸಾರಿಗೆ, ಉದ್ಯಾನವನ, ಸಿ.ಎ.ಸೈಟುಗಳ ಮಂಜೂರಾತಿ, ಇತ್ಯಾದಿಗಳನ್ನು ಅಭಿವೃದ್ಧಿ ಪ್ರಾಧಿಕಾರ/ಬಿ.ಡಿ.ಎ/ಕೆ.ಆರ್.ಡಿ.ಎ/ಸ್ಥಳೀಯ ಯೋಜನಾ ಪ್ರಾಧಿಕಾರ/ ಬಿ.ಎಂ.ಟಿ.ಸಿ.ಎಸ್.ಸಿ.ಸಿ/ ಪ್ರಾಧಿಕಾರಗಳಿಂದ ಅನುಮೋದಿಸಿದ ನಕಾಶೆಯ ರಸ್ತೆ ಪ್ರದೇಶ ಹೊರತು ನಿರ್ದೇಶಾನುಸಿದ ನಿಯಮಗಳ ರೀತ್ಯಾ ಸದರಿ ಪ್ರಾಧಿಕಾರಗಳಿಗೆ ಹಸ್ತಾಂತರಿಸತಕ್ಕದ್ದು.

5. ಪ್ರಾಧಿಕಾರದ ಅನುಮೋದಿತ ನಕ್ಷೆ ಪ್ರಕಾರ ನಿವೇಶನಗಳನ್ನು/ಕಟ್ಟಡಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಂದ / ಅನುಮೋದನಾಧಿಕಾರಿಗಳಿಂದ ಮೊದಾವಣೆ ಮಾಡತಕ್ಕದ್ದು, ಜಂಟಿದಾರರು ಉಳಿದ ವೇಳೆ ಸಿಬ್ಬಂದಿಗಳಿಗೆ ಅವಶ್ಯಕ ಮಂಜೂರು ಮಾಡಿರುವ ಜಮೀನಿನ ಸರಿಯಾ ವಿಸ್ತೀರ್ಣವನ್ನು ಮಾರಾಟ ಮಾಡಲು ಅರ್ಜಿಸಿದಲ್ಲಿ ಈ ಆದೇಶ ಅನ್ವಯ ಬರುತ್ತದೆ.

6. ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಜಮೀನಿನಲ್ಲಿ ನಿವೇಶನದಾರರಿಗೆ ಮೂಲಭೂತ ಸೌಲಭ್ಯಗಳಾದ ವಿದ್ಯುಚ್ಛಕ್ತಿ ಕುಡಿಯುವ ನೀರು ರಸ್ತೆ, ಸಂಪರ್ಕ, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಅಯೋಗ್ಯ ನೈಸರ್ಗಿಕರಣ ಹಾಗೂ ಭೂಪ್ರದೇಶಗಳ ಅಭಿವೃದ್ಧಿಯಿಂದ ಈ ಎಲ್ಲ ಸೌಲಭ್ಯಗಳನ್ನು ಕಾಯ್ದೆಯ ರೀತ್ಯ ಒದಗಿಸಿಕೊಡುವುದು ಅರ್ಜಿದಾರರ ಜವಾಬ್ದಾರಿಯಾಗಿರುತ್ತದೆ.

7. ಈ ಜಮೀನಿನ ಸರ್ವೆ ನಂ. 75/1 ರಲ್ಲಿ 0.0.03 ಗುಂಟೆ ಜಾಗದ ಲಗ್ನ ಬಿ ಖರಾಬು ಇದ್ದು, ಇದನ್ನು ಸರ್ಕಾರ್ಕೆ ಒಳಪಡಿಸತಕ್ಕದ್ದು. ಕಂದಾಯಾಧಿಕಾರಿಗಳು ಈ ಬಾಬ್ತು ಆರ್.ಟಿ.ಸಿಯಲ್ಲಿ ನಮೂದಿಸತಕ್ಕದ್ದು.

8. ಸರ್ಕಾರದ ಆದೇಶ ಸಂಖ್ಯೆ ಪಿಡಬ್ಲ್ಯೂಡಿ 1550–665 ಆರ್ ಎಸ್ಟು ಬಿ–ಗ–54–5 ಮತ್ತು ಕಂದಾಯ ಸರ್ಕಾರ ಸಾರಿಗೆ ಇಲಾಖೆಯ ಸತ್ರದ ನಂ. ಪಿ.ಎ.1/7(1)67. ದಿನಾಂಕ: 01–01–1966 ರಂತೆ ಸರ್ಕಾರವು ಕಾಲಕಾಲಕ್ಕೆ ನೀಡುವ ಅದೇಶದಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸುವ ಕಟ್ಟಡವು ರಾಷ್ಟ್ರೀಯ ಹೆದ್ದಾರಿ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಎಡ್ಡಭಾಗದಿಂದ 40 ಮೀಟರ್‌ಗಳ ಅಂತರವನ್ನು ಮತ್ತು ಜಿಲ್ಲಾ ಹೆದ್ದಾರಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 25 ಮೀಟರ್‌ಗಳ ಅಂತರವನ್ನು ಕಾಯ್ದಿರಿಸಬೇಕು ಹಾಗೂ ಈ ಗಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.

9. ಈ ಪ್ರಕೃತ ಪರಿವರ್ತನೆ ಜಮೀನಿನಲ್ಲಿ ಸ್ಥಳೀಯರಾಗುವ ಕೈಗಾರಿಕಾ ಘಟಕಗಳು ಹೊಗೆಯನ್ನು ಹೊರಡಿಸುವ ಹೊಗೆ, ಅಲೆಗಳು, ಇತರ ಕಲ್ಮಷಗಳನ್ನು ಪರಿಸರಮಾರಿಯಾಗಿ ತಡೆಗಟ್ಟಿ ಸಾರ್ವಜನಿಕರ ಆರೋಗ್ಯಕ್ಕೆ ಯಾವುದೇ ರೀತಿಯ ಹಾನಿಯಾಗದಂತೆ ಹಾಗೂ ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳತಕ್ಕದ್ದು. ಕೈಗಾರಿಕಾ ಉದ್ದೇಶಕ್ಕಾಗಿ ಈ ಪರಿವರ್ತಿತ ಜಮೀನಿನಲ್ಲಿ ಸ್ಥಾಪಿಸುವ ಕೈಗಾರಿಕಾ ಘಟಕಗಳು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಇತರೆ ಇಲಾಖೆಯ ಅನುಮತಿ ಪಡೆದಿರತಕ್ಕದ್ದು.

10. ಈ ಆದೇಶವು ಸದರಿ ಜಮೀನಿಗೆ ಸಂಬಂಧಪಟ್ಟಂತೆ ಯಾವುದೇ ನ್ಯಾಯಾಲಯದಲ್ಲಿನ ದಾವೆ / ರಿಟ್ ಅರ್ಜಿ/ ಮೊಕದ್ದಮೆಯಿರುತ್ತಿರುವುದಕ್ಕೆ ಒಳಪಟ್ಟಿರುತ್ತದೆ.

11. ಪ್ರಸ್ತುತ ಜಮೀನಿನ ಬಗ್ಗೆ ಯಾವುದೇ ಭೂಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟಿದ್ದಲ್ಲಿ ಈ ಪ್ರಾಧಿಕಾರವು ಜವಾಬ್ದಾರಿಯಾಗುವುದಿಲ್ಲ.

12. ಪ್ರಸ್ತುತ ಜಮೀನು ಸರ್ಕಾರಿ ಜಮೀನು ವ್ಯಾಪ್ತಿಗೆ ಒಳಪಟ್ಟಿದ್ದಲ್ಲಿ ಸರ್ಕಾರದ ಭೂ ಕಂದಾಯ ಕಾಯ್ದೆ 1964 ರ ಕಲಂ 136(3) ರ ಅಡಿ ವಿಚಾರಣೆ ನಡೆಸಿ ಹೊರಡಿಸುವ ತೀರ್ಮಾನಕ್ಕೆ ಒಳಪಟ್ಟಿರುತ್ತದೆ.

13. ಕರ್ನಾಟಕ ಪರಿಷ್ಕೃತ ಮಾಸ್ಟರ್ ಪ್ಲಾನ್–2015 ರಲ್ಲಿ ಸೂಕ್ಷ್ಮ ವಲಯ (Sensilive Zone) ನಲ್ಲಿ ಬರುವ ಪ್ರದೇಶಗಳಿಗೆ ಸಂಬಂಧಪಟ್ಟಂತೆ ಪ್ರಾಧಿಕಾರದ ಸೂಕಾನುಮತಿ ಇಲ್ಲದೇ ಉದ್ದೇಶಿತ ಜಾಗದಲ್ಲಿ ಯಾವುದೇ ರೀತಿಯ ಅಭಿವೃದ್ಧಿಯನ್ನು ಕೈಗೊಳ್ಳಬಾರದು.

14. ಉದ್ದೇಶಿತ ಜಾಗದಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಬೇಕಾದಲ್ಲಿ ಪ್ರಾಧಿಕಾರದಿಂದ ರಚಿತವಾದ ಉಪ ಸಮಿತಿಯ ನಿರ್ಣಯದಂತೆ ಕ್ರಮಗಳನ್ನು ಅನುಮೋದಿಸಿಕೊಳ್ಳತಕ್ಕದ್ದು.

15. ಪ್ರಸ್ತುತ ಜಮೀನು ಮುಜರಾಯಿ ಸರ್ಕಾರಿ ಜಮೀನಾಗಿದ್ದಲ್ಲಿ ತಕ್ಷಣವೇ ಎ ಖಾತೆ ಮಾಡಿ ಮಂಡಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

16. ಅರ್ಜಿದಾರರು ಯಾವುದೇ ಸಂಗತಿಗಳನ್ನು ಮರೆ ಮಾಚಿ, ಅವಾಸ್ತವಿಕ ದಾಖಲೆಗಳ ಮೇಲೆ ಈ ಅಧಿಕೃತ ಜ್ಞಾಪನ ಪಡೆದಿರುವುದು ಸ್ಪಷ್ಟವಾಲ್ಲಿ ಸ್ವಯಂತಾನೇ ರದ್ದುಗೊಳ್ಳತಕ್ಕದ್ದು ಹಾಗೂ ಇದರಿಂದ ಅರ್ಜಿದಾರರಿಗಾಗಲೀ ಅಥವಾ ಅವರ ಉತ್ತರಾಧಿಕಾರಿಗಳಿಗಾಗಲೀ ಆಗುವ ಯಾವುದೇ ನಷ್ಟಕ್ಕೆ ಸರ್ಕಾರಕ್ಕಾಗಲೀ ಅಥವಾ ಈ ಪ್ರಾಧಿಕಾರವಾಗಲೀ ಯಾವುದೇ ರೀತಿಯ ಜವಾಬ್ದಾರಿಯಾಗಿರುವುದಿಲ್ಲ. ಇದರ ಪೂರ್ಣ ಜವಾಬ್ದಾರಿಕೆ ಅರ್ಜಿದಾರರದ್ದೇ ಆಗಿರುತ್ತದೆ.